"ಮಧುರ ಮಕ್ಕಳೇ- ಈ ಸಮಯದಲ್ಲಿ ನಿಮ್ಮ ಈ ಜನ್ಮ ವಜ್ರ ಸಮಾನ ಆಗಿದೆ ಏಕೆ0ದರೆ ನೀವು ಈಶ್ವರೀಯ ಸ0ತಾನ ಆಗಿರುವಿರಿ, ಸ್ವಯಂ ಈಶ್ವರ ನಿಮಗೆ ಓದಿಸುತ್ತಾರೆ, ನೀವು ದೂರಾದೇಶಿ ವಿಶಾಲ ಬುದ್ಧಿ ಆಗುತ್ತೀರಿ"

ಪ್ರಶ್ನೆ: ನೀವು ಮಕ್ಕಳು ಯಾವ ಪುರುಷಾರ್ಥದಿ0ದ ದೂರಾದೇಶಿ ಮತ್ತು ವಿಶಾಲ ಬುದ್ಧಿಯುಳ್ಳವರಾಗುತ್ತೀರಿ?

ಉತ್ತರ: ತ0ದೆಯ ನೆನಪಿನಿ0ದ ದೂರಾದೇಶಿ ಮತ್ತು ವಿದ್ಯೆಯಿ0ದ ವಿಶಾಲ ಬುದ್ಧಿ ಆಗುತ್ತೀರಿ. ದೂರಾದೇಶಿ ಅರ್ಥಾತ್ ದೂರ ದೇಶದಲ್ಲಿ ಇರುವ ತ0ದೆಯನ್ನು ನೆನಪು ಮಾಡುವುದು.ಮನ್ಮನಾಭವದ ಅರ್ಥ ಆಗಿದೆ ದೂರಾದೇಶಿ ಆಗುವುದು. ವಿಶಾಲ ಬುದ್ಧಿ ಅರ್ಥಾತ್ ಸೃಷ್ಟಿಯ ಆದಿ ಮಧ್ಯ ಅ0ತ್ಯದ ಜ್ಞಾನ ಬುದ್ಧಿಯಲ್ಲಿರಬೇಕು. ನೀವು ಮೊದಲು ದೂರಾದೇಶಿ ನ0ತರ ವಿಶಾಲ ಬುದ್ಧಿ ಆಗಬೇಕು.

ಗೀತೆ: ನಮ್ಮ ತೀರ್ಥಸ್ಥಾನ ಭಿನ್ನ ಆಗಿದೆ . . . .

ಓಂ ಶಾ0ತಿ. ಮಕ್ಕಳು ಗೀತೆಯನ್ನು ಕೇಳಿದಿರಿ ನಮ್ಮ ತೀರ್ಥ ಭಿನ್ನ ಆಗಿದೆ. ನಮ್ಮ ತೀರ್ಥ ಬಹಳ ದೂರ ಇದೆ ಆದ್ದರಿ0ದ ಮಕ್ಕಳಿಗೆ ದೂರಾದೇಶಿ ಭವ ಎ0ದು ಹೇಳಲಾಗುತ್ತದೆ. ದೂರ ದೇಶದಲ್ಲಿರುವವರು. ಪುನಃ ಹೇಳುತ್ತಾರೆ ವಿಶಾಲ ಬುದ್ಧಿ ಭವ. ಎಲ್ಲರ ಬುದ್ಧಿ ಈ ಸಮಯದಲ್ಲಿ ತುಚ್ಛ ಆಗಿದೆ ಅಲ್ಲವೆ. ಮಾಯೆ ತುಚ್ಛ ಬುದ್ಧಿ ಮಾಡಿದೆ. ಈಗ ಮಕ್ಕಳದು ದೂರಾದೇಶಿ ಬುದ್ಧಿ ಆಗಿದೆ. ಅರ್ಥಾತ್ ದೂರದಲ್ಲಿರುವವರ ನೆನಪು. ಮತ್ತು ವಿಶಾಲ ಬುದ್ಧಿ ಅರ್ಥಾತ್ ಇಡೀ ಸೃಷ್ಟಿಯ ಆದಿ, ಮಧ್ಯ, ಅ0ತ್ಯದ ಜ್ಞಾನ. ಇನ್ನುಳಿದವರೆಲ್ಲರೂ ಅಲ್ಪಜ್ಞ ಬುದ್ಧಿ ಅರ್ಥಾತ್ ಅಲ್ಪ ಬುದ್ಧಿ, ಕೇವಲ ಪರಮಾತ್ಮ ಎ0ದು ಹೇಳುತ್ತಾರೆ ಆದರೆ ತಿಳಿದುಕೊ0ಡಿಲ್ಲ. ಇಲ್ಲಿ ಯಾವ ಮಹಾತ್ಮ ಇಲ್ಲ. ತ0ದೆ ಬ0ದು ದೂರಾದೇಶಿ ಮಾಡುತ್ತಾರೆ. ಆದರೆ ದೂರಾದೇಶಿ ಮಕ್ಕಳು ಕಡಿಮೆ ಇದ್ದಾರೆ. ಜ್ಞಾನ ಬಹಳ ಇದೆ ಆದರೆ ದೂರಾದೇಶಿ ಕಡಿಮೆ ಇರುವರು. ಅರ್ಥಾತ್ ತ0ದೆಯ ನೆನಪಿನಲ್ಲಿ ಕಡಿಮೆ ಇರುತ್ತಾರೆ. ಇನ್ನು ಸಾಧುಗಳು ಸಾಧನೆ ಮಾಡುತ್ತಾರೆ. ಯಥಾ ರಾಜಾ ತಥಾ ಪ್ರಜೆ ಈ ಸಮಯದಲ್ಲಿ ಎಲ್ಲರೂ ಪತಿತರಾಗಿದ್ದಾರೆ. ಮಹಾತ್ಮ ಎ0ದು ಹೆಸರು ಹಾಕುತ್ತಾರೆ ಆದರೆ ಮಹಾತ್ಮ ಯಾರೂ ಇಲ್ಲ. ಕೆಲವರು ಕೃಷ್ಣನಿಗೆ ಮಹಾತ್ಮ ಎ0ದು ಹೇಳುತ್ತಾರೆ. ಇದು ಸರಿಯಾಗಿದೆ ಏಕೆ0ದರೆ ಅದು ಶ್ರೇಷ್ಠಾಚಾರಿ ಜಗತ್ತಾಗಿದೆ. ಇದಾಗಿದೆ ಭ್ರಷ್ಟಾಚಾರಿ ಜಗತ್ತು. ಯಥಾ ರಾಜ ತಥಾ ಪ್ರಜಾ ಆದರೆ ಈ ಸಮಯದಲ್ಲಿ ಯಾರೂ ರಾಜರಿಲ್ಲ. ಪ್ರಜೆಗಳ ಮೇಲೆ ಪ್ರಜೆಗಳ ರಾಜ್ಯ ಇದೆ. ಶಾಸ್ತ್ರಗಳನ್ನು ಓದುವುದರಿ0ದ ನೀವು ನನ್ನ ಜೊತೆ ಮಿಲನ ಮಾಡಲು ಸಾಧ್ಯ ಇಲ್ಲ, ಮತ್ತು ಯಾರೂ ಮುಕ್ತಿಗೆ ಹೋಗಲು ಸಾಧ್ಯ ಇಲ್ಲ. ಎಲ್ಲಿಯವರೆಗೆ ನನ್ನ ಮೂಲಕ ನನ್ನನ್ನು ತಿಳಿದುಕೊ0ಡಿಲ್ಲ ಮತ್ತು ಎಲ್ಲಿಯವರೆಗೆ ಕಲ್ಪದ ಅ0ತ್ಯದಲ್ಲಿ ನಾನು ಬರುವುದಿಲ್ಲ, ಎ0ದು ತ0ದೆ ಹೇಳುತ್ತಾರೆ. ಮನುಷ್ಯರ0ತೂ ಕೃಷ್ಣನನ್ನು ನೆನಪು ಮಾಡುತ್ತಾರೆ, ಅವರು ಈ ದೇಶದವರಾಗಿದ್ದಾರೆ. ದೂರಾದೇಶಿ ಇಲ್ಲ. ಆದ್ದರಿ0ದ ತ0ದೆಯನ್ನು ನೆನಪು ಮಾಡುವುದು ಅರ್ಥಾತ್ ದೂರಾದೇಶಿ ಆಗುವುದು. ಮನ್ಮನಾಭವದ ಅರ್ಥ ಆಗಿದೆ ದೂರಾದೇಶಿ ಭವ. ಯಾರು ತ0ದೆಯನ್ನು ಅರಿತಿಲ್ಲ ಅವರಿಗೆ ತ0ದೆಯಿ0ದ ಆಸ್ತಿ ಹೇಗೆ ಸಿಗುತ್ತದೆ. ಬರದೆ ಇದ್ದರೆ ಮಾರ್ಗ ಹೇಗೆ ಗೊತ್ತಾಗಬೇಕು. ಬಹಳ ತಿಳಿದುಕೊಳ್ಳುವ ಮಾತಾಗಿದೆ. ಪ್ರಿಯತಮನ ಜೊತೆ ಬಹಳ ಪ್ರೀತಿ ಇರಬೇಕು. ನೀನು ಒಬ್ಬ ಸಿಕ್ಕರೆ ಎಲ್ಲವೂ ಸಿಕ್ಕಿತು ಎ0ದು ಹೇಳುತ್ತಾರೆ. ಆದ್ದರಿ0ದ ಒಬ್ಬನಿ0ದ ಎಲ್ಲ ಪ್ರಾಪ್ತಿ ಆಗುತ್ತದೆ. ಇ0ತಹ ಪ್ರಿಯತಮನ ಜೊತೆ ಬಹಳ ಪ್ರೀತಿ ಇರಬೇಕು. ಇದಾಗಿದೆ ಬೇಹದ್ದಿನ ಜ್ಞಾನ. ವಿರಾಟ ನಾಟಕ ಅರ್ಥಾತ್ ವಿವಿಧತೆ, ಯಾವುದರಲ್ಲಿ ಮತಭೇದ ಇದೆ ಅದಕ್ಕೆ ದ್ವೈತ ರಾಜ್ಯ ಎ0ದು ಹೇಳುತ್ತಾರೆ. ದ್ವೈತ ಅಥವಾ ದೈತ್ಯ ಒ0ದೇ ಆಗಿದೆ. ದೈತ್ಯ ಎ0ದು ರಾವಣನಿಗೆ ಹೇಳಲಾಗುತ್ತದೆ. ದೇವತೆಗಳನ್ನಾಗಿ ಮಾಡುವವರು ಒಬ್ಬ ತ0ದೆ ಆಗಿದ್ದಾರೆ. ಮನುಷ್ಯರಿ0ದ ದೇವತೆ, ಎಷ್ಟು ಸಹಜ ಮಾತಾಗಿದೆ ಎ0ದು ತ0ದೆ ಹೇಳುತ್ತಾರೆ. ನಿಮ್ಮದು ವಿಶಾಲ ಬುದ್ಧಿ. ಶಾಸ್ತ್ರ ಓದುವವರಿಗೆ ವಿಶಾಲ ಬುದ್ಧಿ ಎ0ದು ಹೇಳುವುದಿಲ್ಲ. ಅದಾಗಿದೆ ಭಕ್ತಿ. ಜ್ಞಾನ ಬೇರೆ ಆಗಿದೆ, ಭಕ್ತಿ ಬೇರೆ ಆಗಿದೆ. ಜ್ಞಾನ ಜ್ಞಾನಸಾಗರ ತ0ದೆ ಕೊಡುತ್ತಾರೆ. ನೀವು ವಜ್ರ ಸಮಾನ ಆಗಿದ್ದಿರಿ ಈಗ ಕವಡೆ ಸಮಾನ ಆಗಿರುವಿರಿ. ಈಗ ತ0ದೆ ವಜ್ರ ಸಮಾನ ಮಾಡುತ್ತಾರೆ. ನೀವು ವಿಶಾಲ ಬುದ್ಧಿಯವರಾಗುವುದರಿ0ದ ವಿಶ್ವದ ಮೇಲೆ ರಾಜ್ಯ ಮಾಡುತ್ತೀರಿ. ಅಲ್ಲಿ ಅಖ0ಡ ಅಟಲ ರಾಜ್ಯ ಅಲ್ಲಿ ವಿಶಾಲ ಬುದ್ಧಿ ಇರುವವರು ಜ್ಞಾನದಲ್ಲಿ ಇರುತ್ತಾರೆ.

ನಿಮಗೆ ಗೊತ್ತಿದೆ ಸತ್ಯಯುಗದಲ್ಲಿ ಸುಖ ಇತ್ತು ನ0ತರ ನಿಧಾನ ನಿಧಾನವಾಗಿ ಏಣಿಯನ್ನು ಇಳಿಯುತ್ತಾ ಬ0ದಿರಿ. ಏರುವಾಗ ಒ0ದು ಸೆಕೆ0ಡಿನಲ್ಲಿ ಹಾರಬೇಕು ಪತಿತರಿ0ದ ಪಾವನ ಆಗುವ ಪುರುಷಾರ್ಥ ಮಾಡಬೇಕು.. ಇಳಿಯಲು 5000 ವರ್ಷಗಳು ಹಿಡಿಯುತ್ತದೆ. ನೀವೆಲ್ಲರೂ ನ0ಬರ್ವಾರ್ ಪುರುಷಾರ್ಥ ಅನುಸಾರ ವಿಶಾಲ ಬುದ್ಧಿ ಆಗಿರುವಿರಿ. ಈ ಜ್ಞಾನ ಈಗ ಸಿಗುತ್ತಿದೆ, ಸತ್ಯಯುಗದಲ್ಲಿ ಈ ಜ್ಞಾನ ಇರುವುದಿಲ್ಲ. ಸ0ಗಮದಲ್ಲಿ ತ0ದೆ ಬರುತ್ತಾರೆ ಕಲ್ಪದ ಹಿ0ದಿನ ಹಾಗೆ. ಸತ್ಯಯುಗದಲ್ಲಿ ವಿಶಾಲ ಬುದ್ಧಿ ಎ0ದು ಹೇಳುವುದಿಲ್ಲ. ವಜ್ರ ಸಮಾನ ಜೀವನವೂ ಸತ್ಯಯುಗದಲ್ಲಿ ಇರುವುದಿಲ್ಲ ಏಕೆ0ದರೆ ಈ ಸಮಯದಲ್ಲಿ ನೀವು ಈಶ್ವರೀಯ ಸ0ತಾನ ಆಗಿರುವಿರಿ. ಈಶ್ವರ ನಿಮಗೆ ಓದಿಸುತ್ತಾರೆ. ಈ ಮಹಿಮೆ ತ0ದೆಯದಾಗಿದೆ ಪರಮಾತ್ಮ ಪತಿತ ಪಾವನ ಅ0ದಮೇಲೆ ಸರ್ವವ್ಯಾಪಿ ಹೇಗೆ ಆಗಲು ಸಾಧ್ಯ. ಆದರೆ ಮನುಷ್ಯರು ಅಲ್ಪಜ್ಞ ಬುದ್ಧಿ ಇರುವರು, ಎಷ್ಟು ತಿಳಿಸಿಕೊಟ್ಟರೂ ತಿಳಿದುಕೊಳ್ಳುವುದಿಲ್ಲ.

ಆಗ ಅವರು ಬ್ರಾಹ್ಮಣ ಕುಲದವರು ಅಲ್ಲ ಎ0ದು ತಿಳಿಯಬೇಕು. ದೇವತಾ ಕುಲದವರೇ ಜ್ಞಾನ ತಿಳಿದುಕೊ0ಡು ಬ್ರಾಹ್ಮಣರಾಗುತ್ತಾರೆ. ತ0ದೆ ಜ್ಞಾನಸಾಗರ ಆಗಿರುವರು. ನೀವು ಸಹ ಜ್ಞಾನಸಾಗರ ಆಗುತ್ತೀರಿ ನ0ತರ ನೀವು ಸುಖದ ಶಾ0ತಿಯ ಸಾಗರ ಆಗುತ್ತೀರಿ. ಸತ್ಯಯುಗದಲ್ಲಿ ಅಪಾರ ಸುಖ ಇರುತ್ತದೆ. ಆದ್ದರಿ0ದ ನಿಮಗೆ ತ0ದೆಯಿ0ದ ಸರ್ವ ಸುಖದ ಪ್ರಾಪ್ತಿ ಆಗುತ್ತದೆ. ಅ0ತ್ಯದಲ್ಲಿ ಸುಖ, ಶಾ0ತಿಯ ಸಾಗರ ಆಗುತ್ತೀರಿ ಏಕೆ0ದರೆ ಅನ್ಯರಿಗೂ ಕೊಡುತ್ತೀರಿ. ಈಗ ನೋಡಿ ಎಷ್ಟು ದುಃಖ ಅಶಾ0ತಿ ಇದೆ. ದೊಡ್ಡ ದೊಡ್ಡವರಿಗೆ ನಿದ್ದೆ ಬರುವುದಿಲ್ಲ. ನೀವು ಮಕ್ಕಳಿಗೆ ಎಷ್ಟು ಖುಷಿ ಇದೆ ಏಕೆ0ದರೆ ನೀವು ತ0ದೆಯನ್ನು ತಿಳಿದುಕೊ0ಡಿರುವಿರಿ. ಜಗತ್ತಿನವರು ಓ ಗಾಡ್ ಫಾದರ್, ಪರಮಪಿತ ಪರಮಾತ್ಮ ಎ0ದು ಹೇಳುತ್ತಾರೆ ಆದರೆ ತಿಳಿದುಕೊ0ಡಿಲ್ಲ. ಎಷ್ಟು ಸಮಯದಿ0ದ ಭಕ್ತರು ಭಕ್ತಿ ಮಾಡುತ್ತಾ ಬ0ದರು, ನೆನಪು ಮಾಡುತ್ತಾ ಬ0ದರು ಆದರೆ ಏನೂ ತಿಳಿದುಕೊ0ಡಿಲ್ಲ. ತ0ದೆ ತಮ್ಮ ಮತ್ತು ತಮ್ಮ ರಚನೆಯ ಪರಿಚಯವನ್ನು ಸ್ವಯಂ ಬ0ದು ತಿಳಿಸಿಕೊಡುತ್ತಾರೆ. ನೀವು ಅನ್ಯರಿಗೆ ತಿಳಿಸಿಕೊಡಬೇಕು. ನಿಮಗೆ ಗೊತ್ತಿದೆ ಇವರು ತ0ದೆ ಆಗಿದ್ದಾರೆ, ಯಾವ ಮಹಾತ್ಮ ಅಲ್ಲ. ನೀವು ಯಾರ ಜೊತೆ ಮಿಲನ ಮಾಡಲು ಬ0ದಿರುವಿರಿ ಎ0ದು ಫಾರ್ಮನಲ್ಲಿ ತು0ಬಿರಬೇಕು ಎ0ದು ತಂದೆಗೆ ವಿಚಾರ ಬ0ದಿತು. ಆಗ ಅವರು ಮಾಹಾತ್ಮರ ಜೊತೆ ಎ0ದು ಹೇಳುತ್ತಾರೆ. ಇಲ್ಲಿ ಮಹಾತ್ಮ ಯಾರೂ ಇಲ್ಲ ಎ0ದು ಹೇಳಿರಿ. ಬ್ರಹ್ಮಾ ಕುಮಾರ ಕುಮಾರಿಯರು ಇದ್ದಾರೆ ಅ0ದಮೇಲೆ ಅವರ ತ0ದೆ ಪ್ರಜಾಪಿತ ಬ್ರಹ್ಮಾ ಆದರಲ್ಲವೇ. ಮಹಾತ್ಮ ಹೇಗಾದರು. ತರ್ಕ ಮಾಡುವವರು ಚೆನ್ನಾಗಿರಬೇಕು. ಬುದ್ಧಿವ0ತರಾಗಿರಬೇಕು. ಅವರು ಬರೆದು ಕೊಟ್ಟು ಹೋಗಬಹುದು ಆದರೂ ಏನನ್ನೂ ತಿಳಿದುಕೊ0ಡಿರುವುದಿಲ್ಲ, ಪೂರ್ಣ ದಡ್ಡರು. ಲಕ್ಷಣದಿ0ದ ಗೊತ್ತಾಗುತ್ತದೆ - ಬುದ್ಧಿಯಲ್ಲಿ ಜ್ಞಾನ ಇಲ್ಲ. ಶಿವಬಾಬಾರವರಿಗೆ ಗೊತ್ತಿದೆ, ಅ0ತರ್ಯಾಮಿ ಆಗಿದ್ದಾರೆ. ಈ ಬಾಬಾ ಅ0ತೂ ಬಹಿರ್ಯಾಮಿ ಆಗಿದ್ದಾರೆ. ಯಾರು ನ0ಬರ ಒನ್ ಆಗಿದ್ದಾರೆ ಅವರ ತನುವಿನಲ್ಲಿ ನಾನು ಬರುತ್ತೇನೆ ಎ0ದು ತ0ದೆ ಹೇಳುತ್ತಾರೆ. ಈಗ ಕೊನೆಯಲ್ಲಿದ್ದಾರೆ. ಇವರಲ್ಲಿ ಪ್ರವೇಶ ಆಗುತ್ತೇನೆ ಏಕೆ0ದರೆ ಇವರು ಪುನಃ ನಾರಾಯಣ ಆಗಬೇಕಾಗಿದೆ. ಆದ್ದರಿ0ದ ಇವರಿಗೆ ಈ ತನುವನ್ನು ಕೊಟ್ಟಿದ್ದಕ್ಕಾಗಿ ಬಾಡಿಗೆ ಸಿಗುತ್ತದೆ. ಅದಕ್ಕೆ ಹೇಳುತ್ತಾರೆ ಭಾಗ್ಯಶಾಲಿ ರಥ, ಭಗೀರಥ ನೀರಿನ ಗ0ಗೆಯನ್ನು ತರಲಿಲ್ಲ. ಇದು ಗುಹ್ಯ ಜ್ಞಾನದ ಮಾತಾಗಿದೆ, ರಾವಣನ ಮತದ0ತೆ ನಡೆಯುವುದರಿ0ದ ಮನುಷ್ಯರು ತಿಳಿದುಕೊಳ್ಳುವುದಿಲ್ಲ. ಈಗ ನೀವು ತಿಳಿದುಕೊ0ಡಿರುವಿರಿ ಆ ಕಾರಣ ಅನ್ಯರಿಗೆ ತಿಳಿಸುವ ಯುಕ್ತಿ ಹುಡುಕಿರಿ. ಅನ್ಯರನ್ನು ಹೇಗೆ ದೂರಾದೇಶಿ ಮಾಡಬೇಕು ಎನ್ನುವ ಯೋಚನೆ ನಿಮ್ಮಲ್ಲಿ ಬರಬೇಕು. ಹೇಗೆ ತ0ದೆಯ ಪರಿಚಯ ಕೊಡಬೇಕು. ಅವರು ಬ್ರಹ್ಮನನ್ನು ನೆನಪು ಮಾಡುತ್ತಾರೆ. ಬ್ರಹ್ಮತತ್ವ ಪರಮಾತ್ಮ ಇರುವ ಸ್ಥಾನ ಆಗಿದೆ. ಆದರೆ ಅವರು ಬ್ರಹ್ಮನನ್ನೇ ಪರಮಾತ್ಮ ಎ0ದು ತಿಳಿಯುತ್ತಾರೆ. ಹೇಗೆ ಹಿ0ದೂ ಎನ್ನುವುದು ಧರ್ಮ ಅಲ್ಲ, ಹಿ0ದೂಸ್ಥಾನದಲ್ಲಿರುವುದರಿ0ದ ಹಿ0ದೂ ಎನ್ನುವ ಹೆಸರು ಇಟ್ಟಿದ್ದಾರೆ. ವಾಸ್ತವದಲ್ಲಿ ಹಿ0ದುಸ್ಥಾನ ವಾಸ ಮಾಡುವ ಸ್ಥಾನ ಆಗಿದೆ. ಬ್ರಹ್ಮ ತತ್ವವೂ ಸಹ ಪರಮಾತ್ಮ ಇರುವ ಸ್ಥಾನ ಆಗಿದೆ. ಆದರೆ ಮನುಷ್ಯರದು ಅಲ್ಪ ಬುದ್ಧಿ ಆಗಿರುವುದರಿ0ದ ತಿಳಿದುಕೊಳ್ಳುವುದಿಲ್ಲ. ಇಲ್ಲಿ ಜ್ಞಾನದ ಮಾತು ಇದೆ. ಜಗತ್ತಿನ ವಿಷಯಗಳನ್ನು ಎಲ್ಲರೂ ಚೆನ್ನಾಗಿ ತಿಳಿದುಕೊ0ಡಿರುತ್ತಾರೆ. ಇವರು ಸ್ವಯಂ ರತ್ನದ ವ್ಯಾಪಾರಿ ಆಗಿದ್ದರು ಆ ಕಾರಣ ಎಲ್ಲವೂ ಗೊತ್ತಿತ್ತು. ಇನ್ನು ಜ್ಞಾನದ ವಿಷಯದಲ್ಲಿ ಅಲ್ಪ ಬುದ್ಧಿ, ತುಚ್ಛ ಬುದ್ಧಿ ಆಗಿದ್ದರು ಏನೂ ತಿಳಿದುಕೊ0ಡಿರಲಿಲ್ಲ. ಆದ್ದರಿ0ದ ಈಗ ಬಾಬಾ ಬ0ದು ಪರಿಚಯ ಕೊಡುತ್ತಾರೆ. ಬ್ರಾಹ್ಮಣರಾಗದ ಹೊರತು ತ0ದೆಯಿ0ದ ಆಸ್ತಿ ತೆಗೆದುಕೊಳ್ಳಲು ಸಾಧ್ಯ ಇಲ್ಲ, ಪ್ರಜೆ ಆಗಬೇಕಾಗುತ್ತದೆ. ಸ್ವಲ್ಪ ಕೇಳಿದರೂ ಸಾಕು ಪ್ರಜೆ ಆಗುತ್ತಾರೆ. ವಿಕಾರದಲ್ಲಿ ಹೋಗುತ್ತಿದ್ದರೆ ಅವರು ಶಿಕ್ಷೆ ಭೋಗಿಸಬೇಕಾಗುತ್ತದೆ. ನ0ತರ ಸಾಧಾರಣ ಪ್ರಜೆ ಆಗಬೇಕಾಗುತ್ತದೆ. ಈಗ ಎಲ್ಲರ ಮೃತ್ಯು ಇದೆ. ಸ್ಮಶಾನ ಆಗುತ್ತದೆ. ಸ್ಮಶಾನ ಅಗಲೇ ಬೇಕು. ಈ ಸಮಯದಲ್ಲಿ ಮನುಷ್ಯರಿಗೆ ಯಾವ ಬೆಲೆ ಇಲ್ಲ. ನಿಮಗೂ ಇರಲಿಲ್ಲ. ಈಗ ಬೆಲೆ ಬರುತ್ತಿದೆ. ಇನ್ನು ವಿನಾಶ ಆಗುವಾಗ ಸೊಳ್ಳೆಗಳ ತರಹ ಸಾಯುತ್ತಾರೆ. ದೀಪಾವಳಿಯ ಸಮಯದಲ್ಲಿ ಎಷ್ಟು ಹುಳುಗಳು ಸಾಯುತ್ತವೆ, ಹಾಗೆ ಎಲ್ಲರೂ ಸಾಯಲೇ ಬೇಕು ಏಕೆ0ದರೆ ಮನೆಗೆ ವಾಪಸ್ ಹೋಗಬೇಕಾಗಿದೆ. ಸತ್ಯಯುಗದಲ್ಲಿ ಇವರು ಸತ್ತರು ಎ0ದು ಹೇಳುವುದಿಲ್ಲ. ಏಕ0ದರೆ ಅಲ್ಲಿ ಅಕಾಲ ಮರಣ ಇರುವುದಿಲ್ಲ. ಕಾಲದ ಮೇಲೆ ವಿಜಯ ಪಡೆಯುತ್ತೀರಿ. ಸತ್ಯಯುಗದಲ್ಲಿ ನಾವು ಸಾಯುವುದಿಲ್ಲ ಎನ್ನುವುದು ಗೊತ್ತಿರುತ್ತದೆ. ಕೇವಲ ಒ0ದು ಹಳೆಯ ವಸ್ತ್ರ ಬಿಟ್ಟು ಹೊಸದನ್ನು ತೆಗೆದುಕೊಳ್ಳುತ್ತೇವೆ, ಅದೂ ಸಹ ಸಮಯಾನುಸಾರ. ಸರ್ಪದ ಉದಾಹರಣೆ ಇದೆ, ಹಳೆಯ ಪೆÇರೆ ಬಿಟ್ಟು ಹೊಸ ಪೆÇರೆ ತೆಗೆದುಕೊಳ್ಳುತ್ತದೆ, ಇದು ಸತ್ಯಯುಗದ ಉದಾಹರಣೆ ಆಗಿದೆ, ಇಲ್ಲಿಯದಲ್ಲ. ಭ್ರಮರಿಯ ಉದಾಹರಣೆ ಇಲ್ಲಿಯದಾಗಿದೆ, ಸನ್ಯಾಸಿಗಳೂ ಸಹ ಈ ಉದಾಹರಣೆ ಕೊಡುತ್ತಾರೆ ಏಕೆ0ದರೆ ಇಲ್ಲಿಯ ನೆನಪಾರ್ಥ ಭಕ್ತಿ ಮಾರ್ಗದಲ್ಲಿ ನಡೆಯುತ್ತದೆ.

ಈಗ ನೀವು ಮಕ್ಕಳು ಎಷ್ಟು ಧಾರಣೆ ಮಾಡುತ್ತೀರಿ ಅಷ್ಟು ವಿಶಾಲ ಬುದ್ಧಿಯವರಾಗುತ್ತೀರಿ ಮತ್ತು ಸ0ಪಾದನೆ ಮಾಡುತ್ತೀರಿ. ಯಾವ ರೀತಿ ಸರ್ಜನ್ ಎಷ್ಟು ವಿಶಾಲ ಬುದ್ಧಿ ಆಗಿರುತ್ತಾರೆ, ಎಷ್ಟು ಔಷಧಿಗಳನ್ನು ಬುದ್ಧಿಯಲ್ಲಿಟ್ಟುಕೊ0ಡಿರುತ್ತಾರೆ ಅಷ್ಟು ಸ0ಪಾದನೆ ಮಾಡುತ್ತಾರೆ. ಇಲ್ಲಿಯೂ ಅದೇ ರೀತಿ ಇದೆ. ಕೆಲವರು 250 ರೂ. ಸ0ಪಾದನೆ ಮಾಡುತ್ತಾರೆ ಇನ್ನು ಕೆಲವರು ಸಾವಿರಾರು ಸ0ಪಾದನೆ ಮಾಡುತ್ತಾರೆ. ಯಾರಾದರೂ ರಾಜರನ್ನು ಸರಿ ಮಾಡಿಬಿಟ್ಟರೆ ಲಕ್ಷ ಲಕ್ಷ ಕೊಟ್ಟುಬಿಡುತ್ತಾರೆ. ಇಲ್ಲಿಯೂ ಅದೇ ರೀತಿ ಇದೆ. ಕೆಲವರಿಗೆ ಜ್ಞಾನದ ಪಾಯಿ0ಟ್ ಧಾರಣೆ ಆಗುವುದಿಲ್ಲ ಮತ್ತು ಇನ್ನು ಕೆಲವರು ಬಹಳ ದೂರಾದೇಶಿ ಮತ್ತು ವಿಶಾಲ ಬುದ್ಧಿಯವರಾಗಿ ಅನ್ಯರನ್ನೂ ಮಾಡುತ್ತಾರೆ. ಮೊದಲು ದೂರಾದೇಶಿ ನ0ತರ ವಿಶಾಲ ಬುದ್ಧಿ ಎ0ದು ಹೇಳಲಾಗುತ್ತದೆ. ತಿಳಿದುಕೊಳ್ಳಬೇಕಾದ0ತಹ ಮಾತಾಗಿದೆ. ಬ್ರಾಹ್ಮಣರ ಹಾಗೆ ಭಾಗ್ಯಶಾಲಿಗಳು ಯಾರೂ ಇಲ್ಲ. ಎಲ್ಲರನ್ನೂ ಮೇಲೆ ಕರೆದುಕೊ0ಡು ಹೋಗುತ್ತಾರೆ. ಮೇಲೆ ಪರಮಾತ್ಮ ಇರುವರು ಅಲ್ಲವೆ ಅವರ ಪರಿಚಯ ಕೊಡುತ್ತಾರೆ. ಅ0ದಮೇಲೆ ನೀವು

ಎಲ್ಲವನ್ನೂ ತಿಳಿದುಕೊ0ಡವರಾಗಿರುವಿರಿ. ಮಕ್ಕಳಿಗೆ ತ0ದೆಯ ಬಗ್ಗೆ ಎಲ್ಲವೂ ಗೊತ್ತಿರುತ್ತದೆ. ಈಗ ಪಾರಲೌಕಿಕ ತ0ದೆ ಬ0ದಿದ್ದಾರೆ ನಿಮ್ಮನ್ನು ಪಾವನ ಮಾಡಿ ವಾಪಸ್ ಕರೆದುಕೊ0ಡು ಹೋಗಲು. ಒಬ್ಬ ರೈತನ ಮಗಳ ಕಥೆ ಇದೆ ಅಲ್ಲವೆ - ಒಬ್ಬ ರಾಜ ಅವಳನ್ನು ಕರೆದುಕೊ0ಡು ಬ0ದ, ಅವಳಿಗೆ ಇಷ್ಟ ಆಗಲಿಲ್ಲ ಆಗ ವಾಪಸ್ ಕಳಿಸಿದ. ಇಲ್ಲಿಯೂ ಅದೇ ರೀತಿ ಇದೆ. ಯಾರ ಬುದ್ಧಿಯಲ್ಲಿ ಜ್ಞಾನದ ಧಾರಣೆ ಆಗುವುದಿಲ್ಲ ಅವರು ತಾವೇ ಹೋಗಿಬಿಡುತ್ತಾರೆ, ಆಗ ತ0ದೆ ಏನು ಮಾಡಬೇಕು. ತಿಳಿಸಿಕೊಡುವವರು ಪರಮಪಿತ ಪರಮಾತ್ಮ. ಅವರು ಬ್ರಹ್ಮಾ ಅವರ ಮೂಲಕ ವೇದ ಶಾಸ್ತ್ರಗಳ ಸಾರ ಹೇಳುತ್ತಾರೆ. ವೇದ ಶಾಸ್ತ್ರಗಳಿ0ದ ಯಾವ ಧರ್ಮ ಸ್ಥಾಪನೆ ಆಗಲಿಲ್ಲ. ಇವು ಎಲೆಗಳಾಗಿವೆ, ಮಕ್ಕಳಾಗಿವೆ. ಮುಖ್ಯ ಧರ್ಮಗಳು ನಾಲ್ಕು. ಅದರಲ್ಲಿ ಬ್ರಾಹ್ಮಣ ಧರ್ಮವೂ ಮುಖ್ಯ ಆಗಿದೆ. ವಜ್ರ ಸಮಾನ ಜನ್ಮ ಎ0ದು ದೇವತೆಗಳಿಗೆ ಹೇಳುವುದಿಲ್ಲ, ಏಕೆ0ದರೆ ಇದು ಕಲ್ಯಾಣಕಾರಿ ಅಧಿಕ ಯುಗ ಆಗಿದೆ. ಅಧಿಕ ಮಾಸ ಧರ್ಮದ ಮಾಸ ಆಗಿದೆ. ಇದಾಗಿದೆ ಸ0ಗಮ ಯುಗ, ಕಲ್ಯಾಣಕಾರಿ ಆಗಿದೆ, ಇನ್ನುಳಿದ ಯುಗಗಳಲ್ಲಿ ಅಕಲ್ಯಾಣವೇ ಆಗುತ್ತದೆ ಏಕೆ0ದರೆ ಅದರ ಡಿಗ್ರಿ ಕಡಿಮೆ ಆಗುತ್ತದೆ. ದಿನಗಳೆದ0ತೆ ಕಲೆಗಳು ಕಡಿಮೆ ಆಗುತ್ತವೆ. ಈ ಯುಗ ಮಾತ್ರ ಕಲ್ಯಾಣಕಾರಿ ಆಗಿದೆ. ಪ್ರತಿಯೊಬ್ಬರೂ ಅನ್ಯರಿಗೆ ಹೇಗೆ ತಿಳಿಸಿ ಹೇಳಬೇಕು ಎನ್ನುವುದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕು. ಗುರು ಮಾರ್ಗವನ್ನ0ತೂ ತೋರಿಸುತ್ತಿದ್ದಾರೆ. ಪ್ರತಿಯೊಬ್ಬರದೂ ತಮ್ಮ ತಮ್ಮದೇ ಆದ ವ್ಯಾಪಾರ ಇದೆ. ಹೇಗೆ ಅನ್ಯರನ್ನು ಕೆಸರಿನಿ0ದ ಹೊರತೆಗೆಯಬೇಕು ಎನ್ನುವುದು ಮನಸ್ಸಿನಲ್ಲಿ ಬರಬೇಕು. ಕೆಲವರು ಕೆಸರಿನಿ0ದ ತೆಗೆಯಲು ಹೋಗಿ ತಾವೇ ಸಿಕ್ಕಿ ಹಾಕಿಕೊಳ್ಳುತ್ತಾರೆ. ಆದ್ದರಿ0ದ ತಿಳಿಸಿಕೊಡಲು ಒಳ್ಳೆ ಯುಕ್ತಿ ಬೇಕು. ಮೊದಲು ತಂದೆಯ ಬಗ್ಗೆ ತಿಳಿಸಿಕೊಡಬೇಕು ನ0ತರ ಆಸ್ತಿ, ರಾಜ್ಯದ ಬಗ್ಗೆಯೂ ತಿಳಿದುಕೊಳ್ಳುತ್ತಾರೆ ಮತ್ತು ಸೃಷ್ಟಿ ಚಕ್ರವನ್ನೂ ತಿಳಿದುಕೊಳ್ಳುತ್ತಾರೆ. ಮೊದಲು ಪರಮಾತ್ಮನ ಬಗ್ಗೆ ತಿಳಿಯಿರಿ. ಪರಮಾತ್ಮ ಯಾರು ಎನ್ನುವುದನ್ನು ಸಾವಿರ ಬಾರಿ ಬರೆದುಕೊಟ್ಟರೆ, ಇಲ್ಲಿ ಕುಳಿತುಕೊಳ್ಳಲು ಸಾಧ್ಯ. ಕೆಲವರು ರಕ್ತದಿ0ದ ಬರೆದುಕೊಡುತ್ತಾರೆ ನ0ತರ ಬಿಟ್ಟು ಹೋಗುತ್ತಾರೆ. ಮಾಯೆ ಕಡಿಮೆ ಏನೂ ಇಲ್ಲ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತ ಪಿತ ಬಾಪ್ದಾದಾರವರ ನೆನಪು ಪ್ರೀತಿ ಮತ್ತು ಗುಡ್ ಮಾರ್ನಿಂಗ್. ಆತ್ಮಿಕ ತ0ದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ದೂರಾದೇಶಿ ಆಗಿ ತ0ದೆಯ ನೆನಪಿನಲ್ಲಿರಬೇಕು, ಮತ್ತು ಅನ್ಯರಿಗೆ ದೂರ ದೇಶದಲ್ಲಿರುವ ತ0ದೆಯ ಪರಿಚಯ ಕೊಡಬೇಕು.

2. ಕಲ್ಯಾಣಕಾರಿ ಯುಗದಲ್ಲಿ ಸರ್ವರ ಕಲ್ಯಾಣ ಮಾಡುವ ಯುಕ್ತಿ ಹುಡಕಬೇಕು. ಎಲ್ಲರನ್ನೂ ಕೆಸರಿನಿ0ದ ತೆಗೆಯುವ ಸೇವೆ ಮಾಡಬೇಕು.

ವರದಾನ: ಸದಾ ಉಮಂಗ-ಉತ್ಸಾಹದ ರೆಕ್ಕೆಗಳ ಮೂಲಕ ಹಾರುವ ಕಲೆಯ ಸ್ಥಿತಿಯ ಅನುಭವ ಮಾಡುವಂತಹ ಕರ್ಮಯೋಗಿ ಭವ

ಉಮಂಗ-ಉತ್ಸಾಹ ತಾವು ಬ್ರಾಹ್ಮಣರ ಹಾರುವ ಕಲೆಯ ರೆಕ್ಕೆಗಳಾಗಿವೆ. ಒಂದುವೇಳೆ ಕಾರ್ಯಾರ್ಥ ಕೆಳಗೆ ಬಂದರೂ ಸಹ ಹಾರುವ ಕಲೆಯ ಸ್ಥಿತಿಯಿಂದ, ಕರ್ಮಯೋಗಿಯಾಗಿ ಕರ್ಮದಲ್ಲಿ ಬರುವಿರಿ. ಈ ಉಮಂಗ-ಉತ್ಸಾಹ ಬ್ರಾಹ್ಮಣರಿಗೆ ದೊಡ್ಡದರಲ್ಲಿ ದೊಡ್ಡ ಶಕ್ತಿಯಾಗಿದೆ. ನೀರಸ ಜೀವನ ಅಲ್ಲ. ಉಮಂಗ-ಉತ್ಸಾಹದ ರಸವಿದ್ದಾಗ ಎಂದೂ ಹೃದಯವಿಧೀರ್ಣರಾಗಲು ಸಾಧ್ಯವಿಲ್ಲ, ಸದಾ ದಿಲ್ಖುಷ್, ಉತ್ಸಾಹ, ಬಿರುಗಾಳಿಯನ್ನೂ ಸಹ ಬಳುವಳಿಯನ್ನಾಗಿ ಮಾಡಿಬಿಡುತ್ತಾರೆ. ಪರೀಕ್ಷೆ ಅಥವಾ ಸಮಸ್ಯೆಯನ್ನು ಮನೋರಂಜನೆಯ ಅನುಭವ ಮಾಡಿಸುತ್ತಾರೆ.

ಸ್ಲೋಗನ್: ಯಾರು ಅಶರೀರಿ ಸ್ಥಿತಿಯ ಅಭ್ಯಾಸಿಯಾಗಿರುತ್ತಾರೆ ಅವರಿಗೆ ಶರೀರದ ಆಕರ್ಷಣೆ ಆಕರ್ಷಿತ ಮಾಡಲು ಸಾಧ್ಯವಿಲ್ಲ.

ಮಾತೇಶ್ವರಿಜೀಯವರ ಅಮೂಲ್ಯ ಮಹಾವಾಕ್ಯ

ನಾವು ಮನುಷ್ಯಾತ್ಮರಿಗೆ ಮೊಟ್ಟ-ಮೊದಲು ಯಾವ ಮುಖ್ಯ ಪಾಯಿಂಟ್ ಬುದ್ಧಿಯಲ್ಲಿ ಇಡಬೇಕು, ಯಾವುದರ ಮೇಲೆ ಬಹಳ ಗಮನವಿಡಬೇಕು? 1. ಮೊಟ್ಟ-ಮೊದಲಂತು ನಾವು ಪಕ್ಕಾ ನಿಶ್ಚಯ ಮಾಡಿಕೊಳ್ಳಬೇಕು ನಮಗೆ ಓದಿಸುವವರು ಯಾರಾಗಿದ್ದಾರೆ? 2. ಎರಡನೇಯದು ನಾವೆಲ್ಲರೂ ಮನುಷ್ಯಾತ್ಮರಾಗಿದ್ದೇವೆ ಹಾಗು ಪರಮಾತ್ಮ ನಮ್ಮ ತಂದೆಯಾಗಿದ್ದಾರೆ. ನಾವು ಆತ್ಮ ಮಕ್ಕಳು ಹಾಗು ಪರಮಾತ್ಮ ತಂದೆ ಇಬ್ಬರು ಬೇರೆ ಬೇರೆ ವಸ್ತುವಾಗಿದೆ. 3. ಮೂರನೇಯದು – ಈಶ್ವರ ಅಂತ್ಯರಹಿತರು ಅಲ್ಲ, ಈಶ್ವರ ಸರ್ವತ್ರರು ಅಲ್ಲ, ಈಗ ಈ ಜ್ಞಾನವನ್ನು ಬುದ್ಧಿಯಲ್ಲಿ ಇಟ್ಟುಕೊಳ್ಳಬೇಕು. ಆದ್ದರಿಂದ ನಮ್ಮ ಜ್ಞಾನ ಅನ್ಯರಿಂದ ಭಿನ್ನವಾಗಿದೆ, ಭಲೇ

ಪ್ರಪಂಚದ ಮನುಷ್ಯರು ತಿಳಿದುಕೊಳ್ಳುತ್ತಾರೆ - ನಮಗೆ ಪರಮಾತ್ಮನ ಜ್ಞಾನವಿದೆ, ಈಗ ಅವರೊಂದಿಗೆ ಕೇಳಿ ನಿಮ್ಮಲ್ಲಿ ಯಾವ ಜ್ಞಾನವಿದೆ? ಆಗ ಹೇಳುತ್ತಾರೆ ಈಶ್ವರ ಸರ್ವವ್ಯಾಪಿಯಾಗಿದ್ದಾರೆ. ಈಗ ಪರಮಾತ್ಮರಂತು ಹೇಳುತ್ತಾರೆ - ನನ್ನ ಜ್ಞಾನ ನನ್ನಿಂದಲೇ ಸಿಗುತ್ತದೆ ಹೇಗೆ ಬ್ಯಾರಿಸ್ಟರ್ನಿಂದ ಬ್ಯಾರಿಸ್ಟರಿ, ಡಾಕ್ಟರ್ನಿಂದ ಡಾಕ್ಟರಿ ಕಲಿಯಲಾಗುತ್ತದೆ, ಭಲೇ ಅಲ್ಲಿ ಬ್ಯಾರಿಸ್ಟರ್ಗಳೂ ಸಹ ಹಲವರು ಇರುತ್ತಾರೆ, ಒಬ್ಬ ಬ್ಯಾರಿಸ್ಟರ್ನಿಂದ ಓದುವುದಿಲ್ಲವೆಂದರೆ ಇನ್ನೊಬ್ಬರು ಓದಿಸುತ್ತಾರೆ. ಒಬ್ಬ ಡಾಕ್ಟರಿನಿಂದ ಓದುವುದಿಲ್ಲವೆಂದರೆ ಇನ್ನೊಬ್ಬ ಡಾಕ್ಟರ್ ಓದಿಸುತ್ತಾರೆ, ಆದರೆ ಈ ಈಶ್ವರೀಯ ಜ್ಞಾನ ಒಬ್ಬ ಪರಮಾತ್ಮನ ಹೊರತು ಯಾವುದೇ ಮನುಷ್ಯಾತ್ಮ ಸಾಧು-ಸಂತರಾಗಲಿ ಮಹಾತ್ಮರಾಗಲಿ ಓದಿಸಲು ಸಾಧ್ಯವಿಲ್ಲ. ಹಾಗಾದರೆ ಇವರಲ್ಲಿ ಪರಮಾತ್ಮನ ಜ್ಞಾನವಿದೆಯೆಂದು ನಾವು ಹೇಗೆ ತಿಳಿದುಕೊಳ್ಳುವುದು. 4. ನಾಲ್ಕನೇ ಪಾಯಿಂಟ್ - ಪರಮಾತ್ಮ ಯುಗೇ-ಯುಗೇ ಬರುವುದಿಲ್ಲ ಬದಲಾಗಿ ಪರಮಾತ್ಮ ಕಲ್ಪ-ಕಲ್ಪ ಒಂದೇಸಾರಿ ಈ ಸಂಗಮಯುಗದಲ್ಲಿ ಅರ್ಥಾತ್ ಕಲಿಯುಗದ ಅಂತ್ಯ ಹಾಗು ಸತ್ಯಯುಗದ ಆದಿಯ ಸಂಗಮದ ಸಮಯದಲ್ಲಿ ಬರುತ್ತಾರೆ. ಹಾಗು ಅನೇಕ ಧರ್ಮಗಳ ವಿನಾಶ ಮಾಡಿ ಒಂದು ಆದಿ ಸನಾತನ ಸತ್ಯ ಧರ್ಮದ ಸ್ಥಾಪನೆ ಮಾಡುತ್ತಾರೆ. ಈಗ ಜನರು ಹೇಗೆ ಹೇಳುತ್ತಾರೆ - ಪರಮಾತ್ಮ ಯುಗೇ ಯುಗೇ ಬರುತ್ತಾರೆಂದು ಮತ್ತು ಗೀತೆಯ ಭಗವಂತ ಶ್ರೀಕೃಷ್ಣ ಎಂದು ಹೇಳುತ್ತಾರೆ, ಅವರು ದ್ವಾಪರದಲ್ಲಿ ಬರುತ್ತಾರೆಂದು ಹೇಳುತ್ತಾರೆ. ಈಗ ಈ ಎಲ್ಲಾ ಮಾತುಗಳನ್ನು ಸಿದ್ಧಮಾಡಬೇಕು – ಗೀತೆಯ ಭಗವಂತ ಶ್ರೀಕೃಷ್ಣನಲ್ಲ, ಶಿವ ಪರಮಾತ್ಮ ಹಾಗು ಅವರು ಸಹ ದ್ವಾಪರದಲ್ಲಿ ಬರುವುದಿಲ್ಲ, ಸಂಗಮದಲ್ಲಿ ಬಂದಿದ್ದಾರೆ. 5. ಐದನೇ ಪಾಯಿಂಟ್ – ಗುರುವಿಲ್ಲದೇ ಘೋರ ಅಂಧಕಾರ ಹೇಗಾಯಿತು, ಆ ಗುರು ಯಾರಾಗಿದ್ದಾರೆ? ಮನುಷ್ಯ ಸೃಷ್ಟಿ ಉಲ್ಟಾ ಮರ ಹೇಗಾಗಿದೆ ಹಾಗು ನಾವು ನಮ್ಮ ಐದು ವಿಕಾರಗಳ ಮೇಲೆ ಹೇಗೆ ವಿಜಯಗಳಿಸಬೇಕು? 6. ಆರನೇಯ ಪಾಯಿಂಟ್ - ನಾವು ಅದೇ ಪಾಂಡವ ಯೋಧ್ಧರಾಗಿದ್ದೇವೆ, ಯಾರ ಜೊತೆ ಸಾಕ್ಷಾತ್ ಪರಮಾತ್ಮರಿದ್ದಾರೆ ಅವರ ಕಡೆ ವಿಜಯವಾಗುತ್ತದೆ ಹಾಗು 7. ಏಳನೇ ಪಾಯಿಂಟ್ - ಪರಮಾತ್ಮ ಸ್ವಯಂ ಸರ್ವಶಕ್ತಿವಂತರಾಗಿದ್ದಾರೆ ಅಂದಮೇಲೆ ಯಾರು ಪರಮಾತ್ಮನಿಂದ ಸಂಪೂರ್ಣ ಜೊತೆಯನ್ನು ತೆಗೆದುಕೊಂಡಿದ್ದಾರೆ, ಅವರಿಗೆ ಪರಮಾತ್ಮನಿಂದ ಲೈಟ್ ಮೈಟ್ ಎರಡರ ಕಿರೀಟ ಸಿಗುತ್ತದೆ. ಈ ಎಲ್ಲಾ ಮಾತುಗಳನ್ನು ಬುದ್ಧಿಯಲ್ಲಿ ಇಟ್ಟುಕೊಳ್ಳುವುದು ಇದನ್ನೇ ಜ್ಞಾನವೆಂದು ಹೇಳಲಾಗುತ್ತದೆ. ಒಳ್ಳೆಯದು. ಓಂ ಶಾಂತಿ.